ಶ್ರೀಕಂಠಯ್ಯನವರು ಮತ್ತು ಮಾನ್ಯ ಕೃಷ್ಣಪ್ಪನವರೂ ಕೇಳುತ್ತಿದ್ದಾರೆ. ಹಾಗೆ ನೋಡಿದರೆ ಈ ಹೇಮಾವತಿ ಮತ್ತು ಹಾರಂಗಿ ಯೋಜನೆಗಳಿಂದ ನಮ್ಮ ಭಾಗದಲ್ಲಿಯೇ ಹೆಚ್ಚಿನ ಜಮೀನು ಮುಳುಗಡೆ ಆಯಿತು. ಅಂದರೆ ಬೇರೆಯವರಿಗೆ ಅನುಕೂಲವಾಗಲೀ ಎಂದು ನಾವು ಸುಮ್ಮನಾದೆವು. ಒಟ್ಟಿನಲ್ಲಿ ನಾವು ಇದರ ಬಗ್ಗೆ ಆದಷ್ಟು ಬೇಗ ತೀರ್ಮಾನ ಕೈಗೊಳ್ಳುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಈಗ ಕಟ್ಟಾಯ ಹೋಬಳಿ ಜನರು ಭತ್ತದ ಬೆಳೆ ತೆಗೆಯಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಬಿಟ್ಟಿದ್ದಾರೆ. ಈ ಹಂತದಲ್ಲಿ ನೀರನ್ನು ಕೊಡುವುದಿಲ್ಲವೆಂದು ನೋಟೀಸು ಕೊಟ್ಟಿದ್ದಾರೆ. ಇದರಿಂದ ರೈತರಿಗೆ ನಷ್ಟವಾಗುತ್ತದೆ. ಆದ್ದಕಾರಣ ಆ ಜಾಗದ ಪ್ರದೇಶದಲ್ಲಿ ಭತ್ತ ಬೆಳೆಯಲು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಆ ಬಗ್ಗೆ ನನ್ನ ಹತ್ತಿರ ಬಂದು ಮಾತನಾಡಲಿ.

II re.—Non-availability of essential commodities in T. Narasipur due to variation in allotment of Quota.

† ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಟಿ. ನರಸೀಪುರದಲ್ಲಿ ದೊಡ್ಡಬಾಲು ವ್ಯವಸಾಯ ಸೇವಾ ಸಹಕಾರ ಸಂಘವಿದೆ ಈ ಸಹಕಾರ ಸಂಘಕ್ಕೆ ಎರಡು ಪಂಚಾಯಿತಿಗಳು ಸೇರಿವೆ. ಈ ಎರಡು ಪಂಚಾಯಿತಿಗಳಿಗೆ ಸೇರಿದಂತೆ ೫೫ ಸಾವಿರ ಜನಸಂಖ್ಯೆ ಇದೆ. ಈ ಸಹಕಾರ ಸಂಘಕ್ಕೆ ಟಿ. ನರಸೀಪುರದ ತಹಶೀಲ್ದಾರರು ತಾ: ೧೭-೧-೧೯೮೦ ರಂದು ಭೇಟಿ ಕೊಟ್ಟು ಸಾರ್ವಜನಿಕ ವಿತರಣೆ ಮಾಡಲು ಇಟ್ಟಿದ್ದ ಒಂದು ಕ್ವಿಂಟಾಲ್ ಸಕ್ಕರೆಯನ್ನು ಭಷ್ಟಾವಣೆ ಮಾಡಿ ಓಚರ್ ಸಹ ಕೊಡದೆ ಟಿ. ನರಸೀಪುರಕ್ಕೆ ತೆಗೆದುಕೊಂಡು ಬಂದರು ಅಲ್ಲಿಂದ ಇಲ್ಲಿಯವರೆಗೆ ಅಂದರೆ ಕಳೆದ ೬ ತಿಂಗಳುಗಳಿಂದ ಆ ಸಹಕಾರ ಸಂಘಕ್ಕೆ ಸಕ್ಕರೆಯನ್ನು ಕೊಟ್ಟಿಲ್ಲ ಈ ವಿಚಾರವನ್ನು ಆ ಸಹಕಾರ ಸಂಘದವರು ಅರ್ಜಿಗಳ ಮೂಲಕ ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್ ಹಾಗೂ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದರೂ ಸಹ ಇಲ್ಲಿಯವರೆಗೆ ಅಲ್ಲಿನ ತಹಶೀಲ್ದಾರರು ಸಕ್ಕರೆ ಮಗೈರೆ ಏನನ್ನೂ ಅಲ್ಲಿನ ಜನರಿಗೆ ಹಂಚಲು ಒದಗಿಸಿಲ್ಲ. ಇದಕ್ಕೆ ನಾನು ತಿಳಿದುಕೊಂಡಂತೆ ಕಾರಣವಾದರೂ ಇಷ್ಟೆ, ಅಲ್ಲಿನ ತಹಶೀಲ್ದಾರರು ಲೆಕ್ಕಗಳು ಸರಿಯಾಗಿದ್ದ ಸೊಸೈಟಿಯಿಂದ ಓಚರ್ ಕೂಡದೆ ಸಕ್ಕರೆಯನ್ನು ಅಲ್ಲಿಂದ ವಾಪಸ್ ತೆಗೆದುಕೊಂಡು ಬಂದಮೇಲೆ, ಸೊಸೈಟಿಯವರು ಕ್ಷಮಾಪಣೆ ಕೇಳಿಕೊಳ್ಳಬೇಕೆಂಬ ದುರುದ್ದೇಶದಿಂದ ಈ ರೀತಿಯಾಗಿ ಅವರಿಗೆ ತೊಂದರೆ ಕೊಟ್ಟಿದ್ದಾರೆ.

ಮಾನ್ಯ ಅಧ್ಯಕ್ಷರೆ, ಒಂದು ಸೊಸೈಟಿಯಲ್ಲಿ ತಪ್ಪು ಮಾಡಿದ್ದಾರೆ ಅಥವಾ ಮಾಡಿಲ್ಲ ಎಂಬ ಬಗ್ಗೆ ಇವರು ಹೋಗಿ ಚೆಕ್ ಮಾಡುವುದಕ್ಕೆ ಅಧಿಕಾರವಿದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ಇವತ್ತಿನ ದಿವಸ ನಮ್ಮ ಸರ್ಕಾರ ತಹಶೀಲ್ದಾರರ ಮುಖಾಂತರ ಎಲ್ಲೆಲ್ಲಿ ಸಾರ್ವಜನಿಕರಿಗೆ ಕಂದುಕೊರತೆ ಇದೆ ಅಲ್ಲಿ ಅಗತ್ಯ ವಸ್ತುಗಳನ್ನು ಹಂಚುವುದಕ್ಕೆ ವಿಪರ್ಮಾಡು ಮಾಡಿದೆ. ಅಗತ್ಯ ವಸ್ತುಗಳ ವಿತರಣೆಯಲ್ಲಿ ಸಹಕಾರ ಸಂಘಗಳು ಮುಂದೆ ಬರದೇಹೋದರೆ, ಪಂಚಾಯಿತಿಗಳು ಮುಂದೆ ಬರದೇಹೋದರೆ ಫೈರ್‌ಪ್ರೈಸ್ ಷಾಪ್ಸ್ ಓಪನ್ ಮಾಡಲಿಕ್ಕೆ ಸರ್ಕಾರ ಆದೇಶ ಕೊಟ್ಟಿದೆ. ಸಂಘಕ್ಕೂ ಅವಕಾಶಕೊಡದೆ ಪಂಚಾಯಿತಿ ಛೇರ್ಮನ್ನರಿಗೂ ಅವಕಾಶಕೊಡದೆ ತಹಶೀಲ್ದಾರರಿಗೆ ಸ್ವತ್ತುಮುತ್ತಲಿನ ೫೦೦ ಜನ ಇರತಕ್ಕ ಗ್ರಾಮಕ್ಕೆ ಸಕ್ಕರೆ ಮಗೈರೆ ಪಂಚುವುದಕ್ಕೆ ಕೊಟ್ಟಿದ್ದಾರೆ. ಇದರಿಂದ ಬಹಳಷ್ಟು ತೊಂದರೆಯಾಗಿದೆ. ಆದ್ದರಿಂದ ಅಲ್ಲಿರತಕ್ಕವರು ಛೇರ್ಮನ್ನರಿಗೆ ಅವಕಾಶ ಕೊಡಬೇಕು ಎಂದು ಅರ್ಜಿಕೊಟ್ಟಿದ್ದಾರೆ. ಏತನ್ಮಧ್ಯೆ ಸೊಸೈಟಿಯವರು ಒಂದು ಕಂಪ್ಲೈಂಟ್ ಮಾಡಿದ್ದಾರೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್ ರವರಿಗೆ ಕಂಪ್ಲೈಂಟ್ ಮಾಡಿ, ಈರೀತಿ ಸಾರ್ವಜನಿಕರಿಗೆ ಕೊಡುವುದಕ್ಕೆ ಇಟ್ಟಂಥ ಸಕ್ಕರೆಯನ್ನು ತಹಶೀಲ್ದಾರ್‌ರವರು ಬಂದು ನ್ಯಾಯಪಲ್ಲದ ರೀತಿಯಲ್ಲಿ ತೆಗೆದುಕೊಂಡು ಹೋಗಿದ್ದಾರೆ, ಇದರ ಬಗ್ಗೆ ತನಿಖೆಮಾಡಿ ನಮಗೆ ಸರಿಯಾದ ನ್ಯಾಯ ದೊರಕಿಸಿಕೊಡಬೇಕು ಎಂದು ಬರೆದಿದ್ದಾರೆ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ತನಿಖೆ ಮಾಡಿ ಇವರಿಗೆ ಒಂದು ಜವಾಬನ್ನು ಕಳಿಸಿದ್ದಾರೆ. ದಿನಾಂಕ ೨೨-೫-೧೯೮೦ ರಂದು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ತಹಶೀಲ್ದಾರ್‌ರರಿಗೆ ಲೆಟರ್ ಬರೆದು ನಾನು ಎನ್‌ಕ್ವೈರಿ ಮಾಡಿದ್ದೇನೆ, ಸಹಕಾರ ಸಂಘದಲ್ಲಿ ನ್ಯೂನತೆ ಕಂಡುಬಂದಿಲ್ಲ, ನೀವು ಸಕ್ಕರೆ ತಂದಿರ

ತಕ್ಕಂಥಾದ್ದು ಅಕ್ರಮ, ಆ ಸಕ್ಕರೆಯನ್ನು ಬೇಗ ವಾಪಸು ಮಾಡಿ, ಮುಂದೆ ಕೊಡತಕ್ಕಂಥ ಅಗತ್ಯ ಸಾಮಗ್ರಿಗಳನ್ನು ಬೇಗ ಆ ಸಹಕಾರ ಸಂಘಕ್ಕೆ ಕೊಡತಕ್ಕಂಥಾದ್ದು ಎಂದು ಪತ್ರವನ್ನು ಕಳಿಸಿದ್ದಾರೆ. ಇವ್ಯಾದರೂ ಕೂಡ ತಹಶೀಲ್ದಾರ್‌ರವರು ಆ ಸಂಘಕ್ಕೆ ಸಕ್ಕರೆ ಕೊಟ್ಟಿಲ್ಲ, ಅಗತ್ಯ ಸಾಮಗ್ರಿಗಳನ್ನು ಕೊಟ್ಟಿಲ್ಲ. ಅದು ಹೋಗಲಿ, ೫೦೦೦ ಪ್ರಜಾ ಸಂಖ್ಯೆಗೆ ಬೇರೆ ಸೇವಾ ಏಜನ್ಸಿ ಮುಖಾಂತರ ಕೊಡ ತಕ್ಕಂಥಾದ್ದು ಯಾವ ನ್ಯಾಯ, ಛೇರ್ಮನ್‌ರವರು ಬಂದರೂ ಕೊಟ್ಟಿಲ್ಲ. ಮತ್ತೆ ಅಲ್ಲಿ ಫೇರ್‌ಪ್ರೈಸ್ ಷಾಪ್ಸ್ ತೆಗೆಯುವುದಕ್ಕೆ ಅವಕಾಶ ಮಾಡಿ ಅದರ ಮುಖಾಂತರ ಹಂಚುವುದಕ್ಕೆ ಅವಕಾಶಕೊಟ್ಟಿಲ್ಲ. ಈ ರೀತಿ ಯಾಗಿ ೬ ತಿಂಗಳಿಂದ ತೊಂದರೆಯಾಗಿದೆ, ಅಲ್ಲಿ ಬಡವರು ಇರತಕ್ಕ ಪ್ರಜಾಸಂಖ್ಯೆ. ಇಂತಹ ಪ್ರದೇಶಕ್ಕೆ ಅಗತ್ಯ ಸಾಮಗ್ರಿಗಳನ್ನು ಕೊಡದೆ ಇಷ್ಟು ದೌರ್ಜನ್ಯ, ಇಷ್ಟು ಉದ್ಧಟತನ ತೋರಿದ್ದಾರಲ್ಲ, ಇವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತೇನೆ ಈ ಬಗ್ಗೆ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ. ಸಕ್ಕರೆ ಅಲಾಟ್‌ಮೆಂಟ್ ಏಜೆನ್ಸಿಯಿಂದ ಜನವರಿಯಿಂದ ಮೇ ವರೆಗೆ ಕೂಡ ಒಂದೇ ಸಮನಾಗಿ ಟಿ. ನರಸೀಪುರ ತಾಲ್ಲೂಕಿಗೆ ಪ್ರತಿ ತಿಂಗಳೂ ಸ್ವಲ್ಪ ಸ್ವಲ್ಪ ಜಾಸ್ತಿಯಾಗಿ ವಸ್ತುಗಳು ಬಂದಿವೆ. ಆದರೂ ಕೂಡ ಪ್ರಜಾ ಸಂಖ್ಯೆಯ ಆಧಾರದ ಮೇಲೆ ಕೊಟ್ಟಿಲ್ಲ. ಅವರ ವಿಮ್ಸ್ ಆಂಡ್ ಫ್ಯಾನ್ಸಿಯಿಂದ ಕೊಟ್ಟಿದ್ದಾರೆ. ೨೦೦೦ ಪ್ರಜಾಸಂಖ್ಯೆಗೆ ಎರಡು ಮೂಟೆ ಕೊಟ್ಟಿರತಕ್ಕ ಉದಾಹರಣೆ ಇದೆ. ಈ ಅಗತ್ಯ ವಸ್ತುಗಳನ್ನು ವಿತರಣೆ ಮಾಡತಕ್ಕ ಅಧಿಕಾರವನ್ನು ತಹಶೀಲ್ದಾರರಿಗೆ ಕೊಟ್ಟಿರ ತಕ್ಕಂಥಾದ್ದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ, ಕೊಟ್ಟಿರತಕ್ಕಂಥಾದ್ದು ಸಾಧು ಎಂದು ಹೇಳಿದರೂ ಕೂಡ ಸರ್ಕಾರ ಯಾವ ನಿಯಮವನ್ನು ಅವರ ಮೇಲೆ ಹೇರಿದೆ, ಯಾವರೀತಿ ವಿತರಣೆ ಆಗಬೇಕು ಎಂದು ಪ್ರಾಲಿಸಿಯನ್ನು ಹೇಳಿದೆ ಎಂದು ನಾನು ಸರ್ಕಾರದಿಂದ ಕೇಳಬಯಸುತ್ತೇನೆ. ನನಗೆ ತಿಳಿದಪ್ರಕಾರ ಹೋದಸಾರಿ ೫ ಮೂಟೆ ಕೊಟ್ಟಿರುವುದರಿಂದ ಈ ಸಾರಿ ಒಂದು ಮೂಟೆ ಕೊಡುತ್ತೇನೆ ಎಂದು ತಹಶೀಲ್ದಾರರು ಸಾಕಷ್ಟು ಜನಗಳಿಗೆ ಹೇಳಿದ್ದಾರೆ. ಸಹಕಾರ ಸಂಘಗಳ ವತಿಯಿಂದ ಹೋಗತಕ್ಕ ಜನ ಸಕ್ಕರೆ ತರಬಾರದು ಎನ್ನುವಂಥ ಜಿಗುಪ್ಸೆಯಲ್ಲಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಬಹುಶಃ ೫ ತಿಂಗಳಲ್ಲಿ ಕೂಡ ಸರ್ವಸಾಮಾನ್ಯವಾಗಿ ಜಾಸ್ತಿ ಬಂದಿರತಕ್ಕ ಕಾಲದಲ್ಲಿ ತಿಂಗಳತಿಂಗಳಿಗೂ ವೇರೀವೆರಿಯಾಗಿ ಕೊಡತಕ್ಕ ಪಾಲಿಸಿ ಏನು. ಈ ರೀತಿ ಅಧಿಕಾರಿಗಳು ತಮ್ಮಿದೇ ಆದ ಒಂದು ದೃಷ್ಟಿಯಲ್ಲಿ ಹೋದರೆ ನಾವು ಅಲ್ಲಿ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ನಾವು ಇಂಟರ್‌ಫಿಯರ್ ಆಗುವುದಕ್ಕೆ ಆಗುವುದಿಲ್ಲ. ನಾನು ಶಾಸಕನಾಗಿ ಈ ಸೊಸೈಟಿಗೆ ಇಷ್ಟು ಸಕ್ಕರೆ ಕೊಡಿ ಎಂದು ಹೇಳತಕ್ಕ ಅಧಿಕಾರ ನನ್ನದಲ್ಲ. ಇದರ ಬಗ್ಗೆ ಒಳ್ಳೆಯ ಪಾಲಿಸಿ ಹಾಕಿಕೊಂಡು ಜನಸಾಮಾನ್ಯರ ಮೆಚ್ಚುಗೆ ಪಡೆಯತಕ್ಕ ಮಟ್ಟದಲ್ಲಿ ತಹಶೀಲ್ದಾರರು ಇರಬೇಕು. ಆರೀತಿಯಲ್ಲಿ ಈ ತಹಶೀಲ್ದಾರರು ನಡೆದಿಲ್ಲ. ಆ ರೀತಿ ನಡೆದುಕೊಳ್ಳದೇ ಹೋದರೆ ನಮ್ಮಂಥ ಶಾಸಕರಿಗೆ ಬಹಳ ಕಷ್ಟವಾಗುತ್ತದೆ, ಏಕೆಂದರೆ ನಮ್ಮನ್ನು ಜನ ಪ್ರಶ್ನೆ ಮಾಡುತ್ತಾರೆ. ಈ ರೀತಿ ಡಿಸ್ಕ್ರಿಮಿನೇಷನ್ ಯಾತಕ್ಕೋಸ್ಕರ ಮಾಡುತ್ತಾರೆಂದು ಪ್ರಶ್ನೆ ಮಾಡುತ್ತಾರೆ, ಆ ದೃಷ್ಟಿಯಿಂದ ನಾನು ಕೆಲವು ಪ್ರಶ್ನೆಗಳನ್ನು ಮಾನ್ಯ ಮಂತ್ರಿಗಳಿಗೆ ಕೇಳಿದ್ದೇನೆ, ಅದಕ್ಕೆ ಸಮಂಜಾಯಿಷಿ ಕೋಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ:—ಸನ್ಮಾನ್ಯಸಭಾಪತಿಗಳೇ, ಮಾನ್ಯ ಸದಸ್ಯರು ನೋಟೀಸ್ ಕೊಟ್ಟ ಕೂಡಲೆ ಜಿಲ್ಲಾಧಿಕಾರಿಗಳಿಗೆ ಕಳಿಸಿದ ಮೇಲೆ ಅವರು ೪ ಪೇಜ್ ಉತ್ತರ ಕಳಿಸಿದ್ದಾರೆ. ಮಾನ್ಯ ಸದಸ್ಯರಾದ ಮಾದೇಗೌಡರು ಪ್ರಸ್ತಾಪಮಾಡಿರತಕ್ಕ ವಿಚಾರ ಏನಿದೆ ಅದನ್ನು ಬಹುತೇಕ ಜವಾಬ್ದಾರಿಯುತವಾಗಿ ಮಾಹಿತಿ ಇಟ್ಟುಕೊಂಡು ಅವರು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಜಿಲ್ಲಾಧಿಕಾರಿಗಳು ಕೊಟ್ಟಿರತಕ್ಕ ರಿಪೋರ್ಟ್ ಜೊತೆಗೆ ನಮ್ಮ ಫುಡ್ ಆಂಡ್ ಸಿವಿಲ್ ಸಪ್ಲೈಸ್ ಡೆಪ್ಯುಟಿ ಡೈರಕ್ಟರನ್ನು ಟಿ. ನರಸೀಪುರಕ್ಕೆ ಹೋಗಿ ಅಲ್ಲಿ ಏನು ನಡೆದಿದೆ ಎಂಬ ಸತ್ಯಾಂಶವನ್ನು ತಿಳಿದುಕೊಂಡು ಸ್ಥಳದಲ್ಲೇ ಆದನ್ನು ಸರಿಪಡಿಸತಕ್ಕ ಕ್ರಮ ತೆಗೆದುಕೊಂಡು ಕೂಡಲೆ ನನಗೆ ವರದಿ ಮಾಡಬೇಕು ಎಂದು ಹೇಳಿದ್ದೇನೆ, ಅವರು ಬಂದು ಏನು ವರದಿ ಕೊಡುತ್ತಾರೆ ಅದನ್ನು ಮಾನ್ಯ ಸದಸ್ಯರಾದ ಮಾದೇಗೌಡರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಮಾದೇಗೌಡ:—ದಿನಾಂಕ ೨೨-೫-೧೯೮೦ರಲ್ಲಿ ಆಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಸಂಘದ ಬಗ್ಗೆ ವಿಚಾರಣೆಮಾಡಿ ಒಂದು ಕ್ವಿಂಟಾಲ್ ೫೦ ಕೆ. ಜಿ. ಸಕ್ಕರೆಯನ್ನು ವಾಪಸು ಕೊಡಬೇಕು, ಅದರ ಜೊತೆಗೆ ಅಗತ್ಯ ವಸ್ತುಗಳನ್ನು ಕೊಡುವುದನ್ನು ಮುಂದುವರೆಸಬೇಕು ಎಂದು ಸಂಬಂಧಪಟ್ಟ ಮೇಲ್ಅಧಿ

ಕಾರಿಗಳಿಗೆ ಹೇಳಿದಾಗ್ಯೂ ಕೂಡ ಅವರು ಕೊಡದೆ ಇರುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಯಾರು ಬೇಕಾದರೂ ಏನಾದರೂ ಮಾಡಿಕೊಳ್ಳಲಿ ನಮ್ಮ ಪವರ್ ನಮಗೆ ಇದೆ ಎನ್ನುತಕ್ಕ ಧೋರಣೆ ತೋರಿದರೆ ಯಾವರೀತಿ ಸಾರ್ವಜನಿಕ ಸೇವೆ ಮಾಡಿದಹಾಗೆ ಆಗುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ:—ಅಸಿಸ್ಟೆಂಟ್ ರಿಜಿಸ್ಟ್ರಾರ್ ಪತ್ರದ ಬಗ್ಗೆ ಇದರಲ್ಲಿ ಪ್ರಸ್ತಾಪ ಬಂದಿಲ್ಲ, ಆ ಬಗ್ಗೆ ರಿಪೋರ್ಟ್ ಬಂದಿಲ್ಲ. ಮಾನ್ಯ ಸದಸ್ಯರು ಅದನ್ನು ಪ್ರಸ್ತಾಪ ಮಾಡಿದ್ದಾರೆ, ಆ ಲೆಟರನ್ನು ನನಗೆ ಕೊಡಿ. ನಾನು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡೆಪ್ಯುಟಿ ಡೈರೆಕ್ಟರರನ್ನು ಟಿ. ನರಸೀಪುರಕ್ಕೆ ಕಳುಹಿಸಿಕೊಡುತ್ತೇನೆ. ಅವರು ಕೂಲಂಕಷವಾಗಿ ವಿಚಾರಣೆ ಮಾಡಿ ತಹಶೀಲ್ದಾರ್‌ರವರು ಆ ರೀತಿ ಉದ್ಧಟತನದಿಂದ ನಡೆದುಕೊಂಡಿದ್ದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.

೨-೩೦ ಪಿ.ಎಂ.

ಇನ್ನೊಂದು ಹೆಜ್ಜೆ ಮುಂದೆ ಕೂಡ ಹೋಗಿ ಡಿ. ಸಿ. ಯವರ ಮೇಲೂ ಕೂಡ ಅಪಾದನೆಗಳೂ ಇದ್ದರೆ ಅವರ ಮೇಲೂ ಕೂಡ ಏತಕ್ಕೆ ಕ್ರಮ ಕೈಗೊಳ್ಳಬಾರದು ಎನ್ನುವುದನ್ನು ಕೂಡ ಬರೆದು ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇನೆ. ಬರೀ ತಹಶೀಲ್ದಾರರು ತಪ್ಪು ಮಾಡಿದರು ಅಂತ ಅಲ್ಲ, ಡಿ.ಸಿ. ಯವರೇ ಮಾಡಿರಲೀ, ಇಲ್ಲವೇ ಸೆಕ್ರೆಟರಿಯವರೇ ತಪ್ಪು ಮಾಡಿರಲೀ ಇಲ್ಲವೇ ಡೈರಕ್ಟರ್‌ರವರೇ ತಪ್ಪು ಮಾಡಿದರೆ ನಮ್ಮ ಅಧಿಕಾರಿಗಳು ತಪ್ಪು ಮಾಡಿದರೆ ಅದೆನ್ನು ಮುಚ್ಚಿಟ್ಟುಕೊಳ್ಳಬೇಕು ಎನ್ನುವ ಪ್ರಶ್ನೆ. ಇಲ್ಲ, ತಪ್ಪು ಮಾಡಿದವರಿಗೆ ಬರೆ ಹಾಕಿದರೆ ಮುಂದಿನ ಸಲ ಅವರು ತಪ್ಪು ಮಾಡುವುದಕ್ಕೆ ಹೋಗುವುದಿಲ್ಲ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಬರೆದು ಕಳುಹಿಸಿಕೊಟ್ಟರು. ತಹಶೀಲ್ದಾರರು ಈ ರೀತಿ ಮಾಡಿದ್ದಾರೆ ಎನ್ನತಕ್ಕದನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಆದುದರಿಂದ ತಾವು ಕೊಟ್ಟಿರತಕ್ಕ ವರದಿ ಮತ್ತು ಟೀನರಸೀಪುರದಲ್ಲಿ ನಡೆದಿರತಕ್ಕ ಅವ್ಯವಹಾರ ಇವುಗಳನ್ನು ಆದಷ್ಟು ಬೇಗ ತನಿಖೆ ನಡೆಸುತ್ತೇನೆ ಮತ್ತು ಇವತ್ತೆ ಆದೇಶ ಕೊಡುತ್ತೇನೆ ಅಲ್ಲಿ ವಿತರಣೆಯಾಗಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಆ ರೀತಿ ವಿತರಣೆಯಾಗಿರದಿದ್ದರೆ ವಿತರಣೆ ಮಾಡುವುದಕ್ಕೆ ಫುಡ್ ಅಸಿಸ್ಟೆಂಟ್, ಮೈಸೂರು ರವರಿಗೆ ಆದೇಶ ಕೊಡುತ್ತೇನೆ.

ಶ್ರೀ ಕೆ. ಮಾದೇಗೌಡ: ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ತಹಶೀಲ್ದಾರ್‌ರವರಿಗೆ ಬರೆದಿರತಕ್ಕ ಕಾಗದ ಮತ್ತು ಡಿ. ಸಿ. ಯವರಿಗೆ ಬರೆದಿರತಕ್ಕ ಕಾಗದ ಮತ್ತು ಪಂಚಾಯಿತಿ ಛೇರ್‌ಮನ್‌ರವರು ತಹಶೀಲ್ದಾರ್‌ರವರಿಗೆ ರಿಕ್ವೆಸ್ಟ್ ಮಾಡಿಕೊಂಡು ಬರೆದಿರತಕ್ಕಂಥ ಕಾಗದ ಪತ್ರ ಮತ್ತು ಸಾವಿರಾರು ಜನ ಅರ್ಜಿ ಬರೆದು ಕೊಟ್ಟಿರತಕ್ಕದ್ದನ್ನೆಲ್ಲಾ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಸೂಕ್ತ ಕ್ರಮ ತೆಗೆದು ಕೊಳ್ಳಲು ಕಳುಹಿಸಿ ಕೊಡುತ್ತಿದ್ದೇನೆ.

FINANCIAL BUSINESS

Discussion and Voting on the demands for grants for the year 1980-1981.

SRI Y. RAMAKRISHNA (Minister for Law, Parliamentary Affairs and Animal Husbandry):—Sir on the recommendation to the Governor I beg to move:

Demand No. 4

"That a sum not exceeding Rs. 14,99,01,000 on Revenue Account and Rs. 1,02,50,000 on Capital Account inclusive of the sum granted 'on account' be granted to the Government to defray the charges which will come in course of pay-